# ಹೊಸತು

ನೆಮ್ಮದಿಯ ನಾಳೆ ನಮ್ಮದು

## ಒಳಗೇನಿದೆ?


ಮಕ್ಕಳಸ್ನೇಹಿ ಸಮಾಜ ನಿರ್ಮಾಣದಲ್ಲಿ ನಮ್ಮ ಪಾತ್ರ ರೂಪ ಹಾಸನ ... ೪೫

ರಿಸರ್ವ್ ಬ್ಯಾಂಕಿನ ಸ್ವಾಯತ್ತತೆ ಹರಣಕ್ಕೆ ಹುನ್ನಾರ ಎಸ್. ಸುರೇಂದ್ರ ... ೫೭

ಭಾರತದ ಅರ್ಥವ್ಯವಸ್ಥೆಯ ಮೇಲೆ ನೂತನ ಆರ್ಥಿಕ ಎಂಜಿನ್ – ಬ್ರಿಕ್ಸ್-ಬ್ಯಾಂಕ್ ಡಾ॥ ಸುರೇಶ ಕೆ. ಪಿ. ... ೧೭

ಪ್ರಾಚೀನ ಕರ್ನಾಟಕದ ಬಂದರುಗಳು ಮತ್ತು ವ್ಯಾಪಾರೀ ಸಂಘಗಳ ಚಟುವಟಿಕೆ ಸುರೇಶ ತಾಂಡೇಲ ... ೩೧

ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಡಾ॥ ರಾಜಶೇಖರ ಇಚ್ಚಂಗಿ ... ೩೫

ಅಥರ್ವವೇದದ ಒಂದು ಕಿರುನೋಟ ಜಿ. ರಾಮಕೃಷ್ಣ ... ೧೧

ಸ್ವಾತಂತ್ರ್ಯಾನಂತರದ ಭಾರತ – ೨೩ : ಮೋದಿ ಸರ್ಕಾರದ ಆಡಳಿತ : ಅಭಿವೃದ್ಧಿಗಿಂತ ಆತಂಕವೇ ಹೆಚ್ಚು ಸಿ. ಆರ್. ಕೃಷ್ಣರಾವ್ ... ೧೫

ಕತೆ ಶ್ರೀ ಸುಮಿತ್ರಾಸುತ ಅಗಸಬಾಳ ... ೫೨

ಪೊರಕೆ ಪುರಾಣ ಡಾ॥ ಶೈಲಾ ಯು. ... ೨೧

ಕಾವ್ಯಲೋಕ ೩೨, ೩೮, ೪೪

ಕರ್ನಾಟಕ ವೈಜ್ಞಾನಿಕ ಮನೋವೃತ್ತಿ ಆಂದೋಲನ ಎಂ. ಅಬ್ದುಲ್ ರೆಹಮಾನ್ ಪಾಷ ... ೨೬

ಸಾಮಾಜಿಕ ಚಳುವಳಿಗಳು, ಅವುಗಳ ಆದರ್ಶ ಹಾಗೂ ವಾಸ್ತವ ಡಾ॥ ಪ್ರಕಾಶ ದೇಸಾಯಿ ... ೨೩

ಹೊಸಗನ್ನಡ ಸಾಹಿತ್ಯ : ಜನಪದ ಭಾಷೆ ಡಾ॥ ಧನವಂತ ಹಾಜವಗೋಳ ... ೪೧

ಕೃತಿಯಿಂದ ಕೃತಿಗೆ ಮರೀಚಿಕೆಯಾಗಿ ಉಳಿದ ಸ್ತ್ರೀ ಸಂವೇದನೆ ಡಾ॥ ಆರ್. ಶೋಭಾ ... ೨೭

ಅಸ್ಪೃಶ್ಯತೆ ಮತ್ತು ಜಾತಿ ವ್ಯವಸ್ಥೆ ಮೂರ್ನಾಡ್ ರಾಮಸ್ವಾಮಿ ... ೩೩

ಅನುಕರಣೀಯ ಬದುಕಿನ ಮೂರು ಮಾದರಿಗಳು ಎಚ್. ಎಸ್. ಈಶ್ವರ ... ೫೯

ಅನ್ನದಾತನನ್ನು ಆತ್ಮಹತ್ಯೆಗೆ ಶರಣಾಗುವಂತೆ ಮಾಡುತ್ತಿರುವ ದುಷ್ಟ ವ್ಯವಸ್ಥೆ ಜ. ಹೊ. ನಾರಾಯಣ ಸ್ವಾಮಿ ... ೬೧

ಮೋಸಗಾರರಿದ್ದಾರೆ – ಜಾಗ್ರತೆ ನೂತನ ಎಮ್. ದೋಶೆಟ್ಟಿ ... ೩೯

ಪವಿತ್ರ ಗೋವು ಮತ್ತು ಹಿಂಸಾಚಾರ ಕೆ. ಎಲ್. ಗೋಪಾಲಕೃಷ್ಣಯ್ಯ ... ೪೯

ನಾನು ಓದಿದ ಪುಸ್ತಕ : ಭಾಮಿನಿ ಷಟ್ಪದಿ ಎಂಬ ಹೆಣ್ಣಿನ ಯಾತನ ಪಲ್ಲವಿಗಳು ಶಕೀಲಾ ಕೆ. ... ೫೩

ವಿಶ್ವವೀಕ್ಷಣೆ : ಸಿರಿಯಾ ಅಂತರ್ಯುದ್ಧ ಸೃಷ್ಟಿಸಿರುವ ನಿರಾಶ್ರಿತರ ಸಮಸ್ಯೆ ಸೀಯಾರ್ಕೆ ... ೫೬

ನಭಾವಲೋಕನ : ಮುಂಜಾವಿನ ವಿಶೇಷಗಳು ಡಾ॥ ಬಿ. ಎಸ್. ಶೈಲಜಾ ... ೪೮

ಹೊಸ ಓದು ಕಲ್ಲೇಶ್ ಕುಂಬಾರ್, ಡಾ॥ ಎಂ. ವೆಂಕಟಸ್ವಾಮಿ, ಶ್ರೀಸುಮಿತ್ರಾಸುತ ಅಗಸಬಾಳ ... ೨೦

ಸಾದರ ಸ್ವೀಕಾರ ... ೪೩

ಕ್ಷ-ಕಿರಣ ಸಾನ್ವಿ ಪಿ. ... ೩೦



ಚಿತ್ರಗಳು : ಪಿ. ಗೋಪಾಲ್, ಗೋಪಿ, ಶ್ರೀಹರಿ, ತನು, ಷಣ್ಮುಖ
ಕಮಲಂ ಅರಸು, ಜಿಎಂಬೊ
ಮುಖಪುಟ : ಮಕ್ಕಳ ದಿನಾಚರಣೆಯ ಅಂಗವಾಗಿ 'ಹೊಸತು' ಚಿತ್ರ
ವಿನ್ಯಾಸ : ನವಕರ್ನಾಟಕ ವಿನ್ಯಾಸ
ಕಚೇರಿ ಸಹಕಾರ : ಜಿ. ವಿ. ತೇಜೋವತಿ


## ಈ ತಿಂಗಳು


ರಾಜಮಹೇಂದ್ರಿಯ ಬಳಿ ಶುಭ ಮುಹೂರ್ತದಲ್ಲಿ ಗೋದಾವರಿ ಸ್ನಾನ ಮಾಡಲು ಹೋಗಿದ್ದವರಲ್ಲಿ ಸುಮಾರು ೮೦ ಜನ ಕಾಲ್ತುಳಿತಕ್ಕೆ ಸಿಕ್ಕಿ ಸತ್ತುಹೋದರು. ಅಲ್ಲಿ ನಡೆದ ದುರಂತಕ್ಕೆ ಮುಖ್ಯಮಂತ್ರಿ ಮತ್ತು ಅವರ ದೊಡ್ಡ ಅನುಯಾಯಿ ಬಣ ಕಾರಣವೆಂದು ಹೇಳಲಾಯಿತು. ಶುಭಸ್ನಾನವು ಚಿತಾರೋಹಣದಲ್ಲಿ ಪರಿಸಮಾಪ್ತಿಯಾಗಿಹೋಯಿತು. ಈಗ ಮೆಕ್ಕಾ-ಮದೀನಾದಲ್ಲಿ ಭಗವಂತನ ಪಾದ ಸೇರಿಕೊಂಡವರ ಸಂಖ್ಯೆ ಒಂದು ಸಾವಿರವನ್ನು ದಾಟಿದೆ. ದೇವರ ಸಾಯುಜ್ಯ ಪಡೆಯಲು ಇದೊಂದು ನೂತನ ವಿಧಾನ ಎಂಬಂತೆ ಆಗಿಹೋಗಿದೆ. ಮಿನಾದಲ್ಲಿ ಸೈತಾನನಿಗೆ ಕಲ್ಲು ಹೊಡೆಯಲು ಹೋದವರು ಬಹುಶಃ ಅವನ ಕೋಪಕ್ಕೆ ತುತ್ತಾದರೋ ಏನೋ ! ಅಲ್ಲಿ ಇಂತಹ ಸಾವು ಸಂಭವಿಸಿರುವುದು ಇದೇ ಮೊದಲಿನದಲ್ಲ. ಲಕ್ಷಗಟ್ಟಲೆ ಜನರ ಸಂದಣಿಯಲ್ಲಿ ಎಂತಹ ವ್ಯವಸ್ಥೆಯೂ ಕುಸಿದುಬೀಳಬಹುದು. ಅದನ್ನು ದಕ್ಷತೆಯಿಂದ ನಿಭಾಯಿಸಲು ಸೌದಿ ಅರೇಬಿಯಾ ಸರ್ಕಾರಕ್ಕೆ ಅನುಭವ ಪಡೆಯಲು ಅವಕಾಶಗಳಿದ್ದರೂ ಏನೂ ಪ್ರಯೋಜನವಾಗಿಲ್ಲ. ಕಲ್ಲು ಹೊಡೆಯುವ ಮೌಢ್ಯವನ್ನು ನಿವಾರಿಸಿಕೊಳ್ಳುವುದೊಂದೇ ದೇವರ ಭಕ್ತರಿಗೆ ಉಳಿದಿರುವ ಮಾರ್ಗ. ಇಲ್ಲೇ ಎಲ್ಲಾದರೂ ಒಂದು ಕಂಬಕ್ಕೆ ಕಲ್ಲೆಸೆದು ಮಿನಾಕ್ಕೆ ಅದು ತಲುಪಿತೆಂದು ಭಾವಿಸಿಕೊಳ್ಳಲು ಅಡ್ಡಿಯಿಲ್ಲ. ಅದಕ್ಕೆ ಮೌಲ್ವಿಗಳು ಸಹ ಅನುಜ್ಞೆ ನೀಡುವುದು ಸ್ವಾಗತಾರ್ಹ ಬೆಳವಣಿಗೆಯಾಗುತ್ತದೆ. ಕ್ರಮೇಣ ಕಲ್ಲೆಸೆಯದೆಯೇ ಎಸೆದೆವೆಂದು ಭಾವಿಸುವ ಸ್ವಭಾವ ಬೆಳೆಯಬಹುದು. "ಸುವರ್ಣಾರ್ಥೇ ಅಕ್ಷತಾನ್ ಸಮರ್ಪಯಾಮಿ" (ಚಿನ್ನದ ಹೆಸರಿನಲ್ಲಿ ನಿನಗೆ ಬಣ್ಣದ ಅಕ್ಕಿಕಾಳು ಸಮರ್ಪಿಸುತ್ತಿದ್ದೇನೆ) ಎಂಬ ಪದ್ಧತಿಗೆ ಸಮನಾದ್ದು ಅದು. ಸಾವಿರಾರು ಜನ ಪ್ರಾಣ ಕಳೆದುಕೊಳ್ಳುವುದನ್ನು ತಪ್ಪಿಸಲು ವರ್ಷದ ಒಂದು ದಿನ ಭಕ್ತರು ಇರುವೆಡೆಯೇ ಒಂದೊಂದು ಕಲ್ಲುಕಂಬ ಹುಡುಕಿಕೊಳ್ಳುವುದು ಕ್ಷೇಮ.

* * *

ಪ್ರಧಾನಿ ಮೋದಿ ಅಮೆರಿಕಾಕ್ಕೆ ಹೋಗಿ ಏನೇನು ಸಾಧಿಸಿಕೊಂಡು ಬಂದರೋ ಇನ್ನೂ ಪೂರ್ತಿಯಾಗಿ ತಿಳಿದಿಲ್ಲ. "ಬೆರಳುಗಳಿಂದ ಪವಾಡ" ಮಾಡಿದ ನಮ್ಮ ಕಂಪ್ಯೂಟರ್ ತಜ್ಞರ "ಮಿದುಳುಗಳನ್ನು ಅಮೆರಿಕಾದಲ್ಲಿ ನಿಕ್ಷೇಪ" ಮಾಡಿರುವುದನ್ನು ಸಂತಸದಿಂದ ಹೇಳಿಬಂದರು. ನಮ್ಮ ದೇಶದಿಂದ ಹೋಗಿರುವ ವಿಜ್ಞಾನಿಗಳು, ಹೊಟೇಲ್ ಮಾಲೀಕರು, ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರು, ಅಸಂಖ್ಯ ವೈದ್ಯರು ಮಾಡಿರಬಹುದಾದ ಯಾವ ಪವಾಡವನ್ನೂ ಮೋದಿ ನೆನೆಯಲಿಲ್ಲ. ಇವರಲ್ಲದೆ ಇನ್ನೂ ಲಕ್ಷಗಟ್ಟಲೆ ಜನ ಹಲವಾರು ಉದ್ಯೋಗಗಳಲ್ಲಿದ್ದಾರೆ. ಅವರಲ್ಲಿ ಯೋಗದ ಅಂಗಡಿಗಳನ್ನು ತೆರೆದವರೂ ಸೇರಿದ್ದಾರೆ. ಅವರನ್ನೇಕೆ ಪ್ರಧಾನಿ ಮರೆತರೋ ತಿಳಿಯದು ! ಎಷ್ಟು ಮೂಟೆಗಳಲ್ಲಿ ವಿದೇಶಿ ಬಂಡವಾಳವನ್ನು ಅಮೆರಿಕಾದ ಉದ್ಯಮಿಗಳು ತರುತ್ತಾರೆ, ಅದನ್ನಿಲ್ಲಿ ಹೂಡಿ ಸರಕು ರಫ್ತು ಮಾಡುತ್ತಾರೆ, ಉದ್ಯೋಗ ಕಲ್ಪಿಸುತ್ತಾರೆ, ಮುಂತಾದ ನಿರೀಕ್ಷೆಗಳು ಸದ್ಯಕ್ಕೆ ಕೇವಲ ಆಶಯದ ಮಟ್ಟದಲ್ಲಿವೆ. ನಿಜಕ್ಕೂ ಹೂಡಿಕೆ ಜರುಗಿದಾಗ ಎಷ್ಟು ಭೂಮಿಯನ್ನು ಹೂಡಿಕೆದಾರರಿಗೆ ಕೊಡಬೇಕಾಗಬಹುದೋ ಅದನ್ನು ಆತಂಕದಿಂದ ಕಾದುನೋಡಬೇಕು. ಆದರೆ ನಿಜಕ್ಕೂ ವ್ಯವಹಾರ ಕುದುರಿದ್ದು ಅಮೆರಿಕಾದ ಕಂಪನಿಗಳಿಗೆ. ಮೋದಿ – ಒಬಾಮ ಸಹಿ ಮಾಡಿದ ಒಪ್ಪಂದಗಳ ಪ್ರಕಾರ ನಮ್ಮ ದೇಶವು ಅಮೆರಿಕಾದಿಂದ ರಕ್ಷಣಾ ಸಾಮಗ್ರಿಗಳನ್ನು ಕೊಳ್ಳಲಿದೆ. ಅದರ ಒಟ್ಟು ಅಂದಾಜು ಮಾಡಲಾದ ಮೊತ್ತವು ಮೂರು ಬಿಲಿಯನ್ ಡಾಲರುಗಳು. ಹಾಗೆಂದರೆ ಎಷ್ಟು ರೂಪಾಯಿಗಳೆಂಬುದನ್ನು ಅರುಣ್ ಜೇಟ್ಲಿ ಮಾತ್ರ ಹೇಳಬಲ್ಲರು ! ರಿಸರ್ವ್ ಬ್ಯಾಂಕ್‌ನ ಮುಖ್ಯಸ್ಥ ರಾಜನ್ ಹೇಳಬಹುದಿತ್ತು, ಆದರೆ ಅವರ ಕೈ-ಬಾಯಿ ಕಟ್ಟಿಹಾಕಲಾಗುತ್ತಿದೆ. ಮೂರು ಬಿಲಿಯನ್ ಬೆಲೆಯ ಹೆಲಿಕಾಪ್ಟರ್‌ಗಳು ಒಟ್ಟು ೩೭ ಎಂದು ಹೇಳಲಾಗಿದೆ. ಅವುಗಳ ಬೆಲೆ ೧೯,೮೦೦ ಕೋಟಿ

(೬ನೇ ಪುಟಕ್ಕೆ)

# ಸಾಮಾಜಿಕ ಚಳುವಳಿಗಳು, ಅವುಗಳ ಆದರ್ಶ ಹಾಗೂ ವಾಸ್ತವ



ಸಮತಾ ಸಮಾಜದ ನಿರ್ಮಾಣಕ್ಕಾಗಿ ಭಾರತದಲ್ಲಿ ಅನೇಕ ಸಾಮಾಜಿಕ ಚಳುವಳಿಗಳು ನಡೆದುಬಂದ ಇತಿಹಾಸ ಭಾರತದ ಸಾಮಾಜಿಕ ಇತಿಹಾಸದ ಜ್ಞಾನವಿರುವ ಎಲ್ಲರಿಗೂ ಗೊತ್ತಿರುವ ವಿಷಯ. ೧೨ನೇ ಶತಮಾನದಿಂದ ೨೦ನೇ ಶತಮಾನದ ಪ್ರಾರಂಭದವರೆಗೂ ಅನೇಕ ಚಳುವಳಿಗಳು ಜರುಗಿ ಸಾಮಾಜಿಕ ಚಿಂತನೆಗಳ ಮೇಲೆ ತಮ್ಮವೇ ಆದ ಗುರುತನ್ನು ಮೂಡಿಸಿವೆ. ಈ ಚಳುವಳಿಗಳು ತಮ್ಮ ಸಮಕಾಲೀನ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸಿ ಅವುಗಳಿಗೆ ಪರಿಹಾರ ಹುಡುಕುವಲ್ಲಿ ಬಹುಮಟ್ಟಿಗೆ ಸಫಲವಾದವು.

ದೇಶ, ಸ್ವತಂತ್ರ ಹೊಂದಿ ಆರು ದಶಕಗಳು ಕಳೆದಿವೆ. ಆದರೂ ಕೆಲವೊಂದು ಮೂಲ ಸಮಸ್ಯೆಗಳ ಕುರಿತು ರಾಷ್ಟ್ರ ಇನ್ನೂ ಸಂದಿಗ್ಧ ಪರಿಸ್ಥಿತಿಯಲ್ಲಿದೆ. ಸಮಾಜದ ರಾಚನಿಕ ಸಮಸ್ಯೆಗಳನ್ನು ಎದುರಿಸಿ ಸಮಾಜದಲ್ಲಿ ಸಮಾನತೆ ತರಲೇಬೇಕೆಂದು ಕಾಣಿಸಿಕೊಂಡ ಸಾಮಾಜಿಕ ಚಳುವಳಿಗಳಾದ ವೀರಶೈವ ಚಳುವಳಿ, ಸ್ವಾಭಿಮಾನ ಅಥವಾ ಆತ್ಮಗೌರವ ಚಳುವಳಿ ಮತ್ತು ದಲಿತ-ಬಹುಜನರ ಚಳುವಳಿಗಳು ಈಗ ಮಾಡುತ್ತಿರುವದೇನು ಎಂಬುದನ್ನು ತಿಳಿಯುವದು ಬಹಳ ಮುಖ್ಯ. ಈ ಅಗತ್ಯಕ್ಕೆ ಕಳೆದ ಎರಡು ದಶಕಗಳಿಂದ ಕ್ರಮೇಣವಾಗಿ ಬಲಶಾಲಿಯಾಗುತ್ತಾ ಸಾಂಸ್ಕೃತಿಕ ರಾಷ್ಟ್ರೀಯವಾದದ ಹೆಸರಿನಲ್ಲಿ ಬಂದಿರುವ ಕೋಮುವಾದ ಮತ್ತು ಬಹುಸಂಖ್ಯಾತವಾದ ದೇಶಾದ್ಯಂತ ತುಂಬಿ ತುಳುಕುತ್ತಿರುವ ಜಾತಿವಾದ, ಮತಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ತರ್ಕಸಮ್ಮತವಲ್ಲದ ವಿಚಾರಗಳನ್ನು ಪ್ರಚುರಪಡಿಸುತ್ತಿರುವ ಧಾರ್ಮಿಕ ಮಾಂತ್ರಿಕರ ಅಟ್ಟಹಾಸಗಳು ಮೂಲ ಕಾರಣ.

ಧಾರ್ಮಿಕ ಚಳುವಳಿಗಳಲ್ಲೊಂದಾದ ವೀರಶೈವ ಚಳುವಳಿಯು ಧಾರ್ಮಿಕ ಚಳುವಳಿಗಿಂತ ಸಾಮಾಜಿಕ ಚಳುವಳಿಯೆಂದೇ ಗುರುತಿಸಲ್ಪಟ್ಟಿದ್ದು, ಈ ಚಳುವಳಿಯ ರೂವಾರಿ ಬಸವಣ್ಣನಿಂದ ಹಿಡಿದು ಉಳಿದ ಎಲ್ಲ ಚಳುವಳಿಕಾರರು ಅನುಭಾವದ ಜೊತೆ ಸಾಮಾಜಿಕ ಬದಲಾವಣೆಯ ಕಳಕಳಿಯನ್ನು ಇಟ್ಟುಕೊಂಡವರಾಗಿದ್ದರು. ತಮ್ಮ ವಚನಗಳ ಮುಖಾಂತರ ತಮ್ಮ ಸಮಕಾಲೀನ ಸಮಾಜದ ನ್ಯೂನತೆಗಳನ್ನು ಬೆಳಕಿಗೆ ತರುವದರ ಜೊತೆಗೆ ಅನೇಕ ಕ್ರಾಂತಿಕಾರಕ ವಿಚಾರಗಳನ್ನು ಹೇಳಿದರು. ಅವರ ಸಮಾಜ ಬದಲಾವಣೆಯ ಕಳಕಳಿ ಕೇವಲ ತಮ್ಮ ಆದರ್ಶವಾದದ ಸಾಹಿತ್ಯ ರಚನೆಗೆ ಸೀಮಿತವಾಗಿರಲಿಲ್ಲ. ಎಲ್ಲ ಚಳುವಳಿಕಾರರು ಒಂದಲ್ಲ ಒಂದು ತರಹದ ಪ್ರಯೋಗಗಳನ್ನು ಸಮಾಜ ಬದಲಾವಣೆ ನಿಟ್ಟಿನಲ್ಲಿ ಮಾಡಿ ಸಮತಾ ಸಮಾಜದ ಕಲ್ಪನೆಯನ್ನು ಸಮಾಜಕ್ಕೆ ತೋರಿಸಿದರು. ಸಮಾಜದಲ್ಲಿ ಸಾಮಾಜಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಕೆಳಗೆ ತಳ್ಳಲ್ಪಟ್ಟ ಸಮುದಾಯಗಳಿಗೆ ವೀರಶೈವ ಚಳುವಳಿಯಿಂದ ಧಾರ್ಮಿಕ ಮುಕ್ತಿ ಸಿಕ್ಕಿತಾದರೂ ಸಾಮಾಜಿಕ, ಅಂದರೆ ಸಮಾಜದಲ್ಲಿರುವ ಜಾತಿಪದ್ಧತಿಗೆ ಸಂಬಂಧಿಸಿದ ಉಚ್ಚ-ಶ್ರೇಷ್ಠ ಎಂಬ ನಂಬಿಕೆಯಿಂದ ಮುಕ್ತಿ ಸಿಗಲಿಲ್ಲ. ಬಸವಾದಿ ಚಳುವಳಿಕಾರರ ಅನುಭಾವಿಕ ಮತ್ತು ಸಾಮಾಜಿಕ ಸಂದೇಶಗಳಿಂದ ಪ್ರೇರಿತಗೊಂಡ ಅನುಯಾಯಿಗಳು ಸ್ವತಂತ್ರವಾಗಿ ತಮ್ಮದೇ ಆದ ಧರ್ಮ ಅಥವಾ ಪಂಥ ಹೊಂದಿದ ದಿನಗಳಿಂದಲೂ ಅವರಲ್ಲಿ ಇದುವರೆಗೆ ಸಮಾಜದ ಕೆಲವೊಂದು ಮೂಲಭೂತ ಸಮಸ್ಯೆಗಳಿಗೆ ಸ್ಪಂದಿಸಲಿಕ್ಕಾಗಲಿಲ್ಲ. ಇವರು ಕೂಡಾ ತಾವೇ ಪ್ರತಿಭಟಿಸಿದ ಸಾಮಾಜಿಕ ಸಮಸ್ಯೆಗಳಿಂದ ಹೊರಬರಲಾರದೆ ಸಮಾಜಕ್ಕೆ ಒಳಿತೆನಿಸದ ಪದ್ಧತಿಗಳನ್ನು ಪರಿಪಾಲನೆ ಮಾಡುತ್ತಾ ಬಂದು ಅನೇಕಾರ್ಥದಲ್ಲಿ ತಮ್ಮ ಮೂಲ ತತ್ವದ ವಿರೋಧಿಗಳಂತೆ ವರ್ತಿಸಿ ಅದರ ತಿರುಳನ್ನು ತಿಳಿಯಲಾರದೆ ಅದರ ಮಹತ್ವವನ್ನು ತಾವೇ ಖುದ್ದಾಗಿ ಕಡಿಮೆ ಮಾಡಿದ್ದಾರೆ. ಆಧುನಿಕ ಲಿಂಗಾಯತ ಸಮಾಜದಲ್ಲಿ ಅನೇಕ ತರಹದ ಸಾಂಪ್ರದಾಯಿಕ ನಂಬಿಕೆಗಳು ಮತ್ತು ಆಚರಣೆಗಳು ಬಂದಿರುವುದರಿಂದ ಈ ಸಮಾಜವನ್ನು ಸಾಮಾಜಿಕ ಬದಲಾವಣೆಯ ಅಳತೆಗೋಲುಗಳಿಂದ ನೋಡಿದಾಗ ಅದನ್ನು ಒಂದು ವಿಶಿಷ್ಟ

**ಡಾ॥ ಪ್ರಕಾಶ ದೇಸಾಯಿ**

ಸಮುದಾಯವೆಂದು ಗುರುತಿಸಲು ಸಾಧ್ಯವಾಗದು.

೨೦ನೇ ಶತಮಾನದ ಪೆರಿಯಾರ್ ಅವರ ನೇತೃತ್ವದಲ್ಲಿ ಘಟಿಸಿದ ದಕ್ಷಿಣ ಭಾರತದ ಸ್ವಾಭಿಮಾನ ಅಥವಾ ಆತ್ಮಗೌರವ ಚಳುವಳಿಯು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ವಿಶೇಷವಾದ್ದು. ಈ ಚಳುವಳಿಯು ಪೆರಿಯಾರ್ ಅವರ ನಾಸ್ತಿಕ ತರ್ಕವಾದ ದಿಂದ ಪ್ರಭಾವಕ್ಕೊಳಗೊಂಡು ಜಾತೀಯತೆಯಿಂದ ಪೀಡಿತಗೊಂಡ, ಸಾಮಾಜಿಕವಾಗಿ ಶ್ರೇಣೀಕೃತ ವಾಗಿರುವ ವ್ಯವಸ್ಥೆಯ ಸಮಾಜವನ್ನು ಮತ್ತು ಧಾರ್ಮಿಕ ವಿಧ್ಯುಕ್ತ ಕ್ರಿಯೆಗಳಿಗೆ ಸಂಬಂಧಿಸಿದ ಗುಲಾಮಗಿರಿಯನ್ನು ವಿರೋಧಿಸಿತ್ತು. ಇವತ್ತಿನ ತಮಿಳು ರಾಜಕೀಯವನ್ನು ಗಮನಿಸಿದರೆ ಪೆರಿಯಾರ್ ಅವರ ವಿಚಾರಗಳಿಂದ ರಾಜಕೀಯಕ್ಕೆ ಬಂದ ಎಲ್ಲ ಪಕ್ಷಗಳು ಅವರ ಆದರ್ಶಗಳಿಗೆ ಮಹತ್ವ ಕೊಡದೆ ರಾಜಕೀಯ ಅಧಿಕಾರಕ್ಕೆ ಬೆಲೆ ಕೊಟ್ಟಿರುವದನ್ನು ಕಾಣಬಹುದು. ಪೆರಿಯಾರ್ ಅವರ ಸ್ವಾಭಿಮಾನ ಅಥವಾ ಆತ್ಮಗೌರವ ಚಳುವಳಿಯು ತಮಿಳು ಸಮಾಜದ ಬ್ರಾಹ್ಮಣೇತರ ಸಮುದಾಯಗಳಲ್ಲಿ ಬದಲಾವಣೆ ತರಲು ಬಹಳಷ್ಟು ಉತ್ತೇಜನ ಕೊಟ್ಟಿತು. ಇದರ ಉತ್ತೇಜನ ಹಾಗೂ ಸ್ಫೂರ್ತಿಯಿಂದ ಅನೇಕ ಹಿಂದುಳಿದ ಸಮುದಾಯಗಳು ಶಿಕ್ಷಣಕ್ಕೆ ಮಹತ್ವ ಕೊಟ್ಟು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಗಣನೀಯ ಮಟ್ಟದಲ್ಲಿ ಮುಂದುವರಿದಿದ್ದಾರೆ. ಈ ಎಲ್ಲ ಸಮುದಾಯಗಳ ಜೀವನದಲ್ಲಿ ಬಂದ ಬದಲಾವಣೆ ಕುರಿತು ಹೇಳಲೇ ಬೇಕಾದ ವಿಷಯವೇನೆಂದರೆ, ಅವುಗಳು ಎಷ್ಟರಮಟ್ಟಿಗೆ ಉಳಿದ ಸಮುದಾಯಗಳ ಜೊತೆ ಪೆರಿಯಾರ್ ಅವರ ಕ್ರಾಂತಿಕಾರಕ ವಿಚಾರಗಳಿಂದ ಸ್ಫೂರ್ತಿಗೊಂಡು ಸಮತಾ ಸಮಾಜದ ದಾರಿಯಲ್ಲಿ ನಡೆಯುತ್ತಿದ್ದಾರೆ ಎನ್ನುವದು. ಸ್ವಾಭಿಮಾನ ಚಳುವಳಿಯು ರಾಜಕೀಯವಾಗಿ ಸಫಲತೆಯನ್ನು ಕಂಡರೂ ಸಾಮಾಜಿಕವಾಗಿ ನಿರೀಕ್ಷಿಸಿದ ಮಟ್ಟದಲ್ಲಿ ಸಫಲವಾಗಲಿಲ್ಲ. ಅದರ ಆದರ್ಶ ಮತ್ತು ತತ್ವಗಳು ಸಮಾಜದ ಮೇಲೆ ಉಗ್ರವಾದ ಪರಿಣಾಮ ಬೀರಲಿಲ್ಲ. ಇವತ್ತಿನ ತಮಿಳು ಸಮಾಜವನ್ನು ಭಾರತದ ಉಳಿದ ಸಮಾಜಗಳ ಜೊತೆ ಹೋಲಿಸಿ ನೋಡಿದಾಗ ಅದರಲ್ಲಿ ಅತಿ ವಿಶಿಷ್ಟವಾದ ಬದಲಾವಣೆಗಳು ಕಂಡುಬರುವುದಿಲ್ಲ. ಈ ಸಮಾಜದಲ್ಲಿಯೂ ಕೂಡ ಜಾತಿಗೆ ಸಂಬಂಧಿಸಿದ ಹಿಂಸಾತ್ಮಕ ಕೃತ್ಯಗಳನ್ನು ಕಾಣಬಹುದು. ಸಮತಾ ಸಮಾಜದ ಹತ್ತಿರವಿರದ ಅನೇಕ ನಂಬಿಕೆಗಳನ್ನು ಕಾಣಬಹುದು. ಮತ್ತು ಮದುವೆ ಸಂಬಂಧದ ವಿಷಯವನ್ನು ನೋಡಿದಾಗ ಅದು ಪೆರಿಯಾರ್ ಅವರ ವಿಚಾರದಿಂದ ಬಹುಮಟ್ಟಿಗೆ ದೂರವೇ ಉಳಿದಿದೆ.

ವೀರಶೈವ ಚಳುವಳಿಯ ಮತ್ತು ಸ್ವಾಭಿಮಾನ ಅಥವಾ ಆತ್ಮಗೌರವ ಚಳುವಳಿಯ ಆದರ್ಶಗಳು ಅವುಗಳ ಪರಿಪಾಲಕರೆಂದು ಕರೆದುಕೊಳ್ಳುವ ಸಮುದಾಯ ಹಾಗೂ ಸಮಾಜಗಳಿಂದ ದೂರವಾಗು ತ್ತಿದ್ದರೆ, ಇಂದಿಗೂ ಈ ಚಳುವಳಿಗಳ ಆದರ್ಶಗಳನ್ನು ಜೀವಂತವಾಗಿಟ್ಟಿರುವ ಮತ್ತು ಅವುಗಳನ್ನು ಇನ್ನು ಹೆಚ್ಚಿನ ಮಟ್ಟಿಗೆ ಪ್ರಖರಪಡಿಸುವ ಒಲವು ತೋರಿಸಿರುವ ಸಮುದಾಯಗಳೆಂದರೆ ದಲಿತ ಮತ್ತು ಬಹುಜನ ಸಮುದಾಯಗಳು. ದಲಿತ ಮತ್ತು ಬಹುಜನ ಸಮಾಜಗಳ ಸಾಮಾಜಿಕ ಚಳುವಳಿಗಳು ಆಧುನಿಕ ಭಾರತದಲ್ಲಿ ಮಹಾರಾಷ್ಟ್ರದಿಂದ ಅತಿ ಹೆಚ್ಚು ಪರಿಣಾಮಕಾರಿಯಾಗಿ ಪ್ರಾರಂಭಗೊಂಡರೂ ಅವುಗಳ ಧ್ವನಿ ಮತ್ತು ಪ್ರತಿಭಟನೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಕೂಡ ನಡೆದವು. ಮಹಾರಾಷ್ಟ್ರದಲ್ಲಿ ದಲಿತ-ಬಹುಜನರ ಚಳುವಳಿ ಜ್ಯೋತಿ ಬಾ ಫುಲೆ ಅವರ ಸತ್ಯಶೋಧಕ ಸಮಾಜದ ಮುಖಾಂತರ ನಡೆದರೆ ದೇಶದ ವಿವಿಧ ಭಾಗಗಳಾದ ಪಂಜಾಬ, ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಮಂಗೂರಾಮ, ನಾರಾಯಣ ಗುರು, ಅಯ್ಯಂಕಲಿ, ಪೊಟ್ಟಲೂರಿ ವೀರಬ್ರಹ್ಮನ್ ಮತ್ತು ಈಯೋತಿ ದಾಸ್ ಅವರಂತಹ ಕ್ರಾಂತಿಕಾರಿಗಳಿಂದ ನಡೆಯಿತು. ದಲಿತ-ಬಹುಜನ ಸಮಾಜದ ಚಳುವಳಿಗಳು ದೇಶದ ವಿವಿಧ ಪ್ರಾಂತ್ಯಗಳಲ್ಲಿ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟಗಳನ್ನು ಖ್ಯಾತ ಸಮಾಜ ವಿಜ್ಞಾನಿ ಜಿ. ಅಲೋಸಿಯಸ್ ತಮ್ಮ ಕೃತಿ 'ಭಾರತದಲ್ಲಿ ರಾಷ್ಟ್ರವಿಲ್ಲದ ರಾಷ್ಟ್ರೀಯವಾದ' ಎಂಬ ಪುಸ್ತಕದಲ್ಲಿ ಸವಿಸ್ತಾರವಾಗಿ ವಿವರಿಸಿದ್ದಾರೆ.

ದಲಿತ-ಬಹುಜನ ಚಳುವಳಿಯು ೧೯ನೇ ಶತಮಾನದ ಮಧ್ಯಭಾಗದಿಂದ ಪ್ರಾರಂಭವಾಗಿ ಮುಂದೆ ಅಂಬೇಡ್ಕರ್ ಅವರಂತಹ ತಾತ್ವಿಕ ಮತ್ತು ಬೌದ್ಧಿಕ ಹೋರಾಟಗಾರರ ನೇತೃತ್ವದಲ್ಲಿ ಮುಂದುವರಿದು ದೇಶ ಸ್ವತಂತ್ರ ಹೊಂದಿದಾಗ ದಲಿತ-ಬಹುಜನ, ಆದಿವಾಸಿ ಹಾಗೂ ಇತರ ಹಿಂದುಳಿದ ವರ್ಗಕ್ಕೆ ಸುಮಾರು ಶತಮಾನಗಳಿಂದ ವಂಚಿತವಾದ ಸ್ಥಾನಮಾನ ಗಳನ್ನು ದೊರಕಿಸುವಲ್ಲಿ ದೊಡ್ಡ ಪಾತ್ರವನ್ನು ವಹಿಸಿತು. ಸಂವಿಧಾನ ರಚನಾ ಸಮಿತಿಯಲ್ಲಿ ಅಂಬೇಡ್ಕರ್ ಅವರು ದಲಿತರ ಹಕ್ಕುಗಳಿಗಾಗಿ ವಾದ ಮಾಡಿರುವ ಇತಿಹಾಸ ಎಲ್ಲರಿಗೂ ಗೊತ್ತಿರುವ ವಿಷಯ. ಅವರ ಪ್ರಯತ್ನದ ಫಲವಾಗಿ ಸಂವಿಧಾನದಲ್ಲಿ ಈ ಜನತೆಯ ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳನ್ನು ರಕ್ಷಿಸಲು ಅನೇಕ ಕಲಮುಗಳನ್ನು ಸೇರಿಸಬೇಕಾಯಿತು. ಸಾಂವಿಧಾನಿಕವಾಗಿ ದೊರೆತ ಹಕ್ಕುಗಳನ್ನು ಅನುಭವಿಸಲು ಮತ್ತು ಅವುಗಳನ್ನು ನೈಜ ಅರ್ಥದಲ್ಲಿ ಪಡೆಯಲು ಸ್ವತಂತ್ರ ಭಾರತದಲ್ಲಿ ದಲಿತ-ಬಹುಜನ ಮತ್ತು ಆದಿವಾಸಿ ಸಮುದಾಯಗಳು ಒಂದರ್ಥದಲ್ಲಿ ಎರಡನೇ ಸ್ವಾತಂತ್ರ್ಯ ಸಂಗ್ರಾಮವನ್ನು ಮಾಡುವಂತಹ ಪರಿಸ್ಥಿತಿ ಬಂದಿತು ಮತ್ತು ಈ ಸಂಗ್ರಾಮದ ಅವಶ್ಯಕತೆ ಈಗಲೂ ಪ್ರಸ್ತುತ. ಭಾರತದ ಸ್ವಾತಂತ್ರ್ಯ ರಾಜಕೀಯ ಸ್ವಾತಂತ್ರ್ಯವೇ ಹೊರತು ಸಾಮಾಜಿಕ ಸ್ವಾತಂತ್ರ್ಯ ವಲ್ಲವೆಂದು ಅಂಬೇಡ್ಕರ್ ಅರಿತಿರುವ ಅನುಭವಗಳನ್ನು ದಲಿತ ಸಮುದಾಯವು ತಿಳಿದುಕೊಂಡು ಆ ಅನುಭವ ಗಳನ್ನು ಅಂಬೇಡ್ಕರ್ ಅವರು ಕೊಟ್ಟ ಎಚ್ಚರಿಕೆಯ ಮಾತುಗಳೆಂದು ತಿಳಿದು ದೇಶ ಸ್ವತಂತ್ರ ಹೊಂದಿದ ಮೊದಲ ದಿನಗಳಿಂದಲೂ ದಲಿತ ಸಮುದಾಯದ ಪ್ರಜ್ಞಾವಂತ ಧುರೀಣರು, ಸಾಹಿತಿಗಳು, ಸಾಮಾಜಿಕ ಕಾರ್ಯಕರ್ತರು ದೇಶದಲ್ಲಿ ತಮ್ಮ ಹಕ್ಕುಗಳ ಕುರಿತು ಚಳುವಳಿಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಸ್ವತಂತ್ರ ಭಾರತದಲ್ಲಿ ದಲಿತ-ಬಹುಜನ ಸಮುದಾಯದಿಂದ ನಡೆದ ಚಳುವಳಿಗಳಲ್ಲಿ ಕೆಲವೊಂದು ಸಂಘಟನೆಗಳಾದ ಮಹಾರಾಷ್ಟ್ರದ ದಲಿತ ಪ್ಯಾಂಥರ್, ಕರ್ನಾಟಕದ ದಲಿತ ಸಂಘರ್ಷ ಸಮಿತಿ, ಅಖಿಲ ಭಾರತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬಹುಜನ ಮತ್ತು ಅಲ್ಪಸಂಖ್ಯಾತರ ಒಕ್ಕೂಟ ಬಹು ಮುಖ್ಯವಾದ ಪಾತ್ರವನ್ನು ವಹಿಸಿವೆ. ಈ ಸಂಘಟನೆಗಳ ಮುಖಾಂತರ ದಲಿತ-ಬಹುಜನರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನ ಹಕ್ಕು ಮತ್ತು ಅಧಿಕಾರಕ್ಕಾಗಿ ಹೋರಾಡಿದ ಧುರೀಣರಲ್ಲಿ ಅನೇಕರಿದ್ದಾರೆ. ಇವರ ಹೋರಾಟ ಶ್ಲಾಘನೀಯ. ದಲಿತ-ಬಹುಜನರ ಸಮಾನತೆಗಾಗಿ ಚಳುವಳಿಗಳ ಜೊತೆಗೆ ರಾಜಕೀಯ ಅಧಿಕಾರದ ಅವಶ್ಯಕತೆ ಕೂಡ ಇದೆ ಎಂಬುದನ್ನು ತಿಳಿದು ದಲಿತ-ಬಹುಜನ ಧುರೀಣರು ರಾಜಕೀಯ ಪಕ್ಷಗಳನ್ನು ಸಂಘಟಿಸಿ ದೇಶದ ಚುನಾವಣಾ ಪ್ರಕ್ರಿಯೆಯಲ್ಲಿಯೂ ಭಾಗವಹಿಸಿ ಗಣನೀಯವಾಗಿ ದಲಿತ-ಬಹುಜನರ ಜೀವನದಲ್ಲಿ ಬದಲಾವಣೆ ಉಂಟಾಗುವ ದಿಶೆಯಲ್ಲಿ ತಮ್ಮ ಕೊಡುಗೆ ನೀಡಿದ್ದಾರೆ. ಇಲ್ಲಿ ಪ್ರಕಾಶ ಅಂಬೇಡ್ಕರ್, ರಾಮದಾಸ ಅಠಾವಳೆ, ಕಾನ್ಶಿರಾಮ, ಮಾಯಾವತಿಯವರು ತಮ್ಮ ಪಕ್ಷಗಳಾದ ರಿಪಬ್ಲಿಕನ್ ಪಾರ್ಟಿ, ಬಹುಜನ ಸಮಾಜ ಪಕ್ಷಗಳ ಮುಖಾಂತರ ರಾಜಕೀಯ ರಂಗದಲ್ಲಿ ಧುಮುಕಿ ದಲಿತ-ಬಹುಜನ ಸಮಾಜಕ್ಕೆ ಸ್ಥೈರ್ಯವನ್ನು ತಂದಿದ್ದಾರೆ.

ಈ ಮೇಲೆ ವಿವರಿಸಿದ ಚಳುವಳಿಗಳಿಂದ ಪ್ರಭಾವಿತಗೊಂಡ ಅಥವಾ ವಾರಸುದಾರರೆಂದೆನಿಸಿ ಕೊಂಡ ಸಮುದಾಯಗಳು, ಧುರೀಣರು ವಾಸ್ತವದಲ್ಲಿ ಚಳುವಳಿಗಳ ಆದರ್ಶಗಳನ್ನು ಅರ್ಥೈಸಿಕೊಂಡು ಯಾವ ದಿಶೆಯಲ್ಲಿದ್ದಾರೆಂಬುದನ್ನು ತಿಳಿಯಬೇಕಾಗಿದೆ. ಭಾರತದ ಇವತ್ತಿನ ರಾಜಕೀಯ ಪಕ್ಷಗಳು ಮತ್ತು ಅವುಗಳಿಗೆ ದೊರಕುತ್ತಿರುವ ವಿವಿಧ ಸಮುದಾಯಗಳ ಬೆಂಬಲದ ಬಗ್ಗೆ ಗಮನ ಹರಿಸಿದಾಗ ಬಹುತೇಕವಾಗಿ ತಿಳಿದು ಬರುವ ವಿಷಯವೇನೆಂದರೆ, ಯಾವ ಸಮುದಾಯಗಳು ಸಾಂಪ್ರದಾಯಿಕ ವ್ಯವಸ್ಥೆಯನ್ನು ವಿರೋಧಿಸಿದ್ದವೋ ಅದೇ ಸಮುದಾಯಗಳು ಇತ್ತೀಚಿಗೆ ಸಂಪ್ರದಾಯ ಮತ್ತು ಅಸಮಾನ ಸಾಮಾಜಿಕ ವ್ಯವಸ್ಥೆಯನ್ನು ಬೆಂಬಲಿಸುವ ಸಾಂಸ್ಕೃತಿಕ ರಾಷ್ಟ್ರವಾದಿ ಪಕ್ಷ ಮತ್ತು ಅದರ ಸಿದ್ಧಾಂತಗಳಿಗೆ ಬೆಂಬಲ ನೀಡುತ್ತಿವೆ. ಇಂತಹ ಸಮುದಾಯಗಳಲ್ಲಿ ವೀರಶೈವ ಚಳುವಳಿಯ ವಾರಸುದಾರರೆಂದೆನಿಸಿದ ಬಹುತೇಕ ಲಿಂಗಾಯತರೂ ಇದ್ದಾರೆ. ಕಳೆದ ಸುಮಾರು ಎರಡು ದಶಕಗಳ ಕರ್ನಾಟಕದ ರಾಜಕೀಯವನ್ನು ಗಮನಿಸಿದರೆ ಈ ವಿಷಯ ಸ್ಪಷ್ಟವಾಗುತ್ತದೆ. ಈ ಸಮುದಾಯದ ಬಹುತೇಕ ಅನುಯಾಯಿಗಳು ಹಾಗೂ ಹಲವಾರು ಮಠಮಾನ್ಯರು ಬಸವಾದಿ ಶರಣರ ಆದರ್ಶಗಳನ್ನು ಬದಿಗಿಟ್ಟು ಕರ್ನಾಟಕ ರಾಜಕೀಯದಲ್ಲಿ ಭಾರತೀಯ ಜನತಾ ಪಕ್ಷದ ನೆಲೆ ಭದ್ರವಾಗಲು ಪರೋಕ್ಷವಾಗಿ ಹಾಗೂ ಅಪರೋಕ್ಷವಾಗಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಗುರ್ತಿಸಲ್ಪಡುವ ಸಂಖ್ಯೆಯಲ್ಲಿ ಭಾರತೀಯ ಜನತಾ ಪಕ್ಷದಿಂದ ಈ ಸಮುದಾಯದ ಧುರೀಣರು ಅಭ್ಯರ್ಥಿಗಳಾಗಿ ರಾಜ್ಯದ ಇತ್ತೀಚಿನ

ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದಾರೆ. ರಾಜ್ಯದ ರಾಜಕೀಯ ಸಾಮಾನ್ಯ ಪರಿಭಾಷೆಯಲ್ಲಿ ಭಾರತೀಯ ಜನತಾ ಪಕ್ಷವು ಲಿಂಗಾಯತರ ಪಕ್ಷವಾಗಿದೆ.

ಭಾರತೀಯ ಜನತಾ ಪಕ್ಷವು ಕೇಂದ್ರದಲ್ಲಿ ಸರ್ಕಾರ ರಚಿಸಿದಾಗ ಆ ಸರ್ಕಾರದಲ್ಲಿ ಪೆರಿಯಾರರ ಚಳುವಳಿಯ ಹಿನ್ನೆಲೆಯಿಂದ ಬಂದ ದ್ರಾವಿಡ ಪಕ್ಷಗಳು ಭಾಗಿಯಾಗಿರುವದನ್ನು ಯೋಚಿಸಿದರೆ ಈ ಪಕ್ಷಗಳಿಗೆ ಆದರ್ಶಕ್ಕಿಂತ ಅಧಿಕಾರವೇ ಮುಖ್ಯವಾಗಿತ್ತು ಎಂದೆನಿಸುತ್ತದೆ. ಅಧಿಕಾರದ ವಿಷಯದಲ್ಲಿ ಈ ರೀತಿ ರಾಜಿಯಾಗುವದರಿಂದ ಆದರ್ಶಗಳ ಬಗ್ಗೆ ಮಾತನಾಡುವಾಗ ಈ ಪಕ್ಷಗಳಿಗೆ ನೈತಿಕ ಸ್ಥೈರ್ಯ ಇರುವದಿಲ್ಲ. ಈಗಾಗಲೇ ರಾಜಕೀಯ ಬೆಂಬಲಕ್ಕಾಗಿ ತಮ್ಮ ಸಾಮಾಜಿಕ ಚಳುವಳಿಯ ಆದರ್ಶಗಳನ್ನು ಬದಿಗಿಟ್ಟು ಜನರನ್ನು ಖುಷಿಪಡಿಸಲು ಗುಡಿಗುಂಡಾರಗಳಿಗೆ ಭೇಟಿ ನೀಡುವುದು, ವಿಜೃಂಭಿತ ಮದುವೆ ಸಮಾರಂಭಗಳಲ್ಲಿ ಉಪಸ್ಥಿತರಾಗಿರುವದು, ಇವು ದ್ರಾವಿಡ ಪಕ್ಷಗಳಿಂದ ಸುಮಾರು ದಿನಗಳಿಂದ ನಡೆದು ಬರುತ್ತಿರುವ ಚಟುವಟಿಕೆಗಳಾಗಿವೆ. ಮುಂದೊಂದು ದಿನ ಭಾರತೀಯ ಜನತಾ ಪಕ್ಷವೇನಾದರೂ ತಮಿಳುನಾಡಿನ ರಾಜಕೀಯದಲ್ಲಿ ತನ್ನ ಸ್ಥಾನವನ್ನು ಗಿಟ್ಟಿಸಿಕೊಂಡರೆ ಈ ಪಕ್ಷ ಮತ್ತು ದ್ರಾವಿಡ ಪಕ್ಷಗಳ ನಡುವೆ ರಾಜಕೀಯ ಬೆಂಬಲಕ್ಕೋಸ್ಕರ ಒಂದು ತರಹದ ಸಾಂಪ್ರದಾಯಿಕ ರಾಜಕೀಯ ತಿಕ್ಕಾಟ ನಡೆಯುವದರಲ್ಲಿ ಸಂದೇಹವಿಲ್ಲ.

ದಲಿತ-ಬಹುಜನ ಚಳುವಳಿಗಳಲ್ಲಿ ಕಳೆದ ಎರಡು ದಶಕಗಳಲ್ಲಿ ನಡೆದ ಬೆಳವಣಿಗೆಗಳನ್ನು ಅವಲೋಕಿಸಿದಾಗ ಅವುಗಳಲ್ಲಿ ಕೆಲಮಟ್ಟಿನ ವಿಪರ್ಯಾಸಗಳನ್ನು ನೋಡಬಹುದು. ಈ ಚಳುವಳಿಗಳಲ್ಲಿನ ಇತ್ತೀಚಿನ ವಿದ್ಯಮಾನಗಳನ್ನು ನೋಡಿದಾಗ ಅಂಬೇಡ್ಕರ್ ಅವರು ಪ್ರತಿಪಾದಿಸುತ್ತಿದ್ದ ಶಿಕ್ಷಣ, ಸಂಘರ್ಷ ಮತ್ತು ಸಂಘಟನೆ ಕುರಿತ ನೈಜ ಅರ್ಥವನ್ನು ತಿಳಿದುಕೊಳ್ಳಲು ಪ್ರಯತ್ನ ಆಗುತ್ತಿಲ್ಲ ಎಂದೆನಿಸುತ್ತದೆ. ದಲಿತ-ಬಹುಜನ ಚಳುವಳಿಯ ಹಿನ್ನೆಲೆಯಿಂದ ಬಂದ ಬಹಳಷ್ಟು ಧುರೀಣರು ಅಧಿಕಾರಕ್ಕೋಸ್ಕರ ಕೋಮುವಾದಿ ಮತ್ತು ಜಾತಿವಾದಿ ಪಕ್ಷಗಳ ಕಡೆ ವಾಲಲಿಲ್ಲ. ಹೇಗಿದ್ದರೂ, ಈ ಚಳುವಳಿಗಳಿಂದ ಬಂದ ಕೆಲವು ನಾಯಕರು ಕೋಮುವಾದಿ ಪಕ್ಷಗಳಿಗೆ ಬೆಂಬಲ ವ್ಯಕ್ತಪಡಿಸಿದ್ದರಲ್ಲದೆ ಅವುಗಳ ನೇತೃತ್ವದ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾರೆ. ಫುಲೆ ಮತ್ತು ಅಂಬೇಡ್ಕರರ ದಲಿತ-ಬಹುಜನ ಚಳುವಳಿ ಹಾಗೂ ಸಿದ್ಧಾಂತದ ಸ್ಫೂರ್ತಿಯಿಂದ ರಾಜಕೀಯಕ್ಕೆ ಬಂದ ಬಹುಜನ ಸಮಾಜ ಪಕ್ಷ ಉತ್ತರಪ್ರದೇಶ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಭಾರತೀಯ ಜನತಾ ಪಕ್ಷವು ಕೂಡ ಪಾತ್ರವಹಿಸಿತ್ತು ಎಂಬುದನ್ನು ಈ ಪಕ್ಷದ ನಾಯಕರು ನೆನಪಿನಲ್ಲಿಡಬೇಕು. ಇಂತಹ ಮೈತ್ರಿಗಳು ಮುಂದೊಂದು ದಿನ ತಮ್ಮ ರಾಷ್ಟ್ರದ ಅಸ್ತಿತ್ವಕ್ಕೇ ಅಪಾಯಕಾರಿಯಾಗ ಬಲ್ಲವು ಎಂಬುದನ್ನು ಈ ಪಕ್ಷ ಚಿಂತಿಸಲಿಲ್ಲ. ಮುಂದೆ, ರಾಜಕೀಯ ಬೆಂಬಲದ ವ್ಯಾಪ್ತಿಯನ್ನು ಹೆಚ್ಚಿಸಲು 'ಬಹುಜನ ಸಮಾಜ ಪಕ್ಷವು ತನ್ನ ಮೂಲ ಘೋಷಣೆಯಾದ ಬಹುಜನ ಹಿತಾಯ-ಬಹುಜನ ಸುಖಾಯ'ವನ್ನು 'ಸರ್ವಜನ ಹಿತಾಯ ಸರ್ವಜನ ಸುಖಾಯ' ಎಂದು ಬದಲಿಸಿರುವ ಘಟನೆಗಳನ್ನು ನೋಡಲಾಗಿದೆ. ಇಂತಹ ಬದಲಾವಣೆಯಲ್ಲಿ ಯಾವುದೇ ನಕಾರಾತ್ಮಕ ಉದ್ದೇಶವಿರದಿದ್ದರೂ ಅವುಗಳಿಂದ ಭಾವನಾತ್ಮಕವಾಗಿ ಮೂಲದಿಂದ ಪಕ್ಷವನ್ನು ಶ್ರದ್ಧೆಯಿಂದ ಬೆಂಬಲಿಸುತ್ತಿರುವ ದಲಿತ-ಬಹುಜನರಿಗೆ ಸಂಶಯ ಮೂಡುವ ಸಾಧ್ಯತೆಗಳಿವೆ. ೨೦೧೪ರ ಲೋಕಸಭೆ ಚುನಾವಣೆಯಲ್ಲಿ ಬಹುಜನ ಸಮಾಜ ಪಕ್ಷ ಉತ್ತರಪ್ರದೇಶದಲ್ಲಿ ತನ್ನ ಮೊದಲಿನ ಸಾಮರ್ಥ್ಯವನ್ನು ಉಳಿಸಿಕೊಳ್ಳಲಿಕ್ಕಾಗಲಿಲ್ಲ. ಸಾಮಾಜಿಕ ಚಳುವಳಿಗಳ ಹಿನ್ನೆಲೆಯಿಂದ ಬಂದ ಬಹುಜನ ಪಕ್ಷವು ಈ ಸ್ಥಿತಿಗೆ ಬರಬೇಕಾದರೆ ಅದರ ಆದರ್ಶಗಳಲ್ಲಿ ಬಂದ ದ್ವಂದ್ವಗಳು ಕೂಡ ಬಹುಮಟ್ಟಿಗೆ ಕಾರಣ.



ವೀರಶೈವ ಮತ್ತು ಸ್ವಾಭಿಮಾನ ಅಥವಾ ಆತ್ಮಗೌರವ ಚಳುವಳಿಗಳ ಆದರ್ಶ ಸಮತಾ ಸಮಾಜದ ನಿರ್ಮಾಣವಾಗಿತ್ತಾದರೂ ಅವುಗಳಲ್ಲಿ ಪ್ರಾರಂಭದಲ್ಲಿದ್ದ ಉತ್ಸಾಹ ಸಮಯ ಗತಿಸಿದಂತೆ ಏಕೆ ಕ್ಷೀಣಿಸಿತು ಎಂಬುದನ್ನು ತಿಳಿದುಕೊಳ್ಳಬೇಕಾದದ್ದು ಈ ಚಳುವಳಿಗಳ ಪರಂಪರೆಯ ವಾರಸುದಾರರು ಅಥವಾ ಪ್ರತಿಪಾಲಕರೆಂದು ಕರೆದುಕೊಳ್ಳುವ ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳುವಂತಹ ಸಮಯ ಈಗ ಬಂದಿದೆ. ದಲಿತ-ಬಹುಜನ ಚಳುವಳಿಗಳ ಬಗ್ಗೆ ಹೇಳಲೇಬೇಕಾದ ಮುಖ್ಯ ವಿಷಯವೇನೆಂದರೆ, ಆದರ್ಶದ ಕುರಿತು ಇರುವ ಒಗ್ಗಟ್ಟಿನ ಕೊರತೆ ಮತ್ತು ಅದರ ಬಗೆಗಿರುವ ಅಸಮ್ಮತಿ. ಸಾಮಾಜಿಕ ನ್ಯಾಯಕ್ಕಾಗಿ ರಾಜಕೀಯ ಅಧಿಕಾರದ ಅವಶ್ಯವಿದ್ದರೂ ಕೂಡ ಅಧಿಕಾರದ ಆಶಯ ಸಾಮಾಜಿಕ ನೆಲೆಯನ್ನು ಮರೆತು ಕೇವಲ ಅಧಿಕಾರದ ಕಡೆಗೆ ವಾಲಿರಕೂಡದು. ಹೀಗಾದಾಗ ಯಾವ ಮೂಲ ಉದ್ದೇಶಕ್ಕಾಗಿ ಚಳುವಳಿಗಳು ಜನ್ಮ ತಾಳಿರುತ್ತವೆಯೋ ಆ ಮೂಲ ಉದ್ದೇಶಗಳು ಬದಿಗುಳಿಯುತ್ತವೆ.

ದೇಶದಲ್ಲಿ ಹೆಚ್ಚುತ್ತಿರುವ ಸಾಂಸ್ಕೃತಿಕ ಬಹುಸಂಖ್ಯಾತವಾದದ ಬಗ್ಗೆ ಮತ್ತು ಹೆಚ್ಚುತ್ತಿರುವ ಬಗ್ಗೆ ಮತ್ತು ಅದರ ವ್ಯಾಪ್ತಿಗೆ ಅನೇಕ ತರಹದ ಕಾರಣಗಳನ್ನು ತೋರಿಸಿ ಬಹಳಷ್ಟು ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆಗಳಲ್ಲಿ ಅಲ್ಪಸಂಖ್ಯಾತರ ಸಂತೈಸುವಿಕೆ, ಮತಾಂತರ, ಭ್ರಷ್ಟಾಚಾರಗಳನ್ನು ಬಹುಸಂಖ್ಯಾತವಾದದ ಮುನ್ನಡೆಗೆ ಕಾರಣಗಳು ಎಂದು ತೋರಿಸಲಾಗಿದೆ. ಈ ಎಲ್ಲ ತಿಳಿಸಿರುವ ಕಾರಣಗಳ ಬಗ್ಗೆ ಯಾವುದೇ ಪ್ರಶ್ನೆಗಳಿರುವದಿಲ್ಲ, ಆದರೆ, ಈ ವಿಶ್ಲೇಷಣೆಗಳಲ್ಲಿ ತಾವು ಪ್ರಗತಿಪರರು ಎಂದು ಹೇಳಿಕೊಳ್ಳುತ್ತಾ ಬಂದ ಸಾಮಾಜಿಕ ಚಳುವಳಿಗಳ ನೆಲೆಯ ಪಕ್ಷಗಳು ಮತ್ತು ಸಮುದಾಯಗಳೂ ಕೂಡ ಯಾವ ರೀತಿ ಕಾರಣವಾಗಿದ್ದಾರೆಂಬುದು ಅಷ್ಟಾಗಿ ಕಂಡುಬರುವದಿಲ್ಲ. ಸಮತಾವಾದದ ಚಳುವಳಿಗಳ ನೆಲೆಯಿಂದ ಬಂದ ಸಮುದಾಯಗಳು ಮತ್ತು ಪಕ್ಷಗಳಲ್ಲಿ ಒಗ್ಗಟ್ಟಿದ್ದರೆ ಕೋಮುವಾದ ಮತ್ತು ಬಹುಸಂಖ್ಯಾತವಾದದ ಶಕ್ತಿಗಳು ಬೆಳೆಯುವದನ್ನು ತಡೆಯಬಹುದಾಗಿತ್ತು. ಇವುಗಳಲ್ಲಿರಬೇಕಾದ ಒಗ್ಗಟ್ಟು ಮತ್ತು ಚಳುವಳಿಗಳ ಆದರ್ಶಗಳ ಪ್ರಜ್ಞೆ ಇರಲಾರದ ಕಾರಣ ಸಾಂಸ್ಕೃತಿಕ ರಾಷ್ಟ್ರವಾದಿ ಶಕ್ತಿಗಳು ಹೆಚ್ಚಿನ ವಿರೋಧವನ್ನು ಎದುರಿಸದೆ ಈ ಸಮುದಾಯಗಳಲ್ಲಿ ತಮ್ಮ ನೆಲೆಯನ್ನು ಭದ್ರಪಡಿಸಿಕೊಳ್ಳುತ್ತಿವೆ. ದೇಶದ ಸಮಗ್ರ ಸಮಾಜಕ್ಕಾಗಿ ಹಾಗೂ ದೇಶದ ಆರೋಗ್ಯಯುತ ಪ್ರಜಾಪ್ರಭುತ್ವಕ್ಕಾಗಿ ಪ್ರಗತಿಪರ ಸಾಮಾಜಿಕ ಚಳುವಳಿಗಳಿಂದ ಬಂದ ಧುರೀಣರು, ಪಕ್ಷಗಳು ಒಗ್ಗಟ್ಟಾಗಿ ವಿವೇಚನೆಯಿಂದ ತಮ್ಮ ಶಕ್ತಿಯನ್ನು ತೋರಿಸಿದರೆ ಈ ದೇಶದಲ್ಲಿ ಯಾವುದೇ ತರಹದ ಜನಪರ ವಿರೋಧಿ ಶಕ್ತಿಗಳು ಬಲಶಾಲಿಯಾಗಲು ಸಾಧ್ಯವಿಲ್ಲ.

ಡಾ॥ ಪ್ರಕಾಶ ದೇಸಾಯಿ
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ
ಗೋವಾ ವಿಶ್ವವಿದ್ಯಾಲಯ, ಗೋವಾ